## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,

**ಸಿ.ಸಿ. ಸಂಖ್ಯೆಃ 1308/2022**

**ಸಿ.ಡಬ್ಲ್ಯೂ:6 /ಪಿ.ಡಬ್ಲ್ಯೂ:5**

**ಪ್ರಮಾಣೀಕರಿಸಿದ ದಿನಾಂಕಃ 27.08.2024**

| | |
|---|---|
| ಹೆಸರು | ಸುರೇಶ್ |
| ತಂದೆಯ ಹೆಸರು | ಜೊಸೆಫ್ ಥಾಮಸ್ |
| ವಯಸ್ಸು | 50 ವರ್ಷ |
| ವೃತ್ತಿ | ಖಾಸಗಿ ನೌಕರ |
| ವಾಸ | ಸೀಗೆಹಳ್ಳಿ, ಕೆ ಆರ್ ಪುರಂ, ಬೆಂಗಳೂರು |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ಚಾಸಾ 1 ನನ್ನ ತಾಯಿ. ಚಾಸಾ4 ಮತ್ತು 5 ಪರಿಚಯ. 1ನೇ ಆರೋಪಿ ಗೊತ್ತಿರುತ್ತಾನೆ.

2. ಸಾಕ್ಷಿಯು ನಿಪಿ5 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸುತ್ತಾರೆ. ಸದರಿ ಸಹಿಯನ್ನು ನಿಪಿ5(ಸಿ) ಎಂದು ಗುರುತಿಸಲಾಯಿತು. ದಿಃ 06.03.2022 ರಂದು ಪೊಲೀಸರು ನಮ್ಮ ಮನೆಯ ಮುಂದೆ ಬಂದು 1ನೇಆರೋಪಿ ನನ್ನ ತಾಯಿಯಾದ ಚಾಸಾ1 ರವರಿಗೆ ಹೊಡೆದು ಒಡವೆಗಳನ್ನು ಕಳ್ಳತನ ಮಾಡಿರುವ ವಿಚಾರವಾಗಿ ಬೆಳಿಗ್ಗೆ 10.30 ರಿಂದ ಮದ್ಯಾಹ್ನದವರೆವಿಗೂ ಪಂಚನಾಮೆ ಮಾಡಿರುತ್ತಾರೆ.

**ಪಾಟೀ ಸವಾಲುಃ-ಆರೋಪಿತರ ಪರ ಶ್ರೀಎಸ್ ಆರ್ ಜೆ ವಕೀಲರಿಂದಃ-**

3. ನಮ್ಮ ಮನೆಯು ಕೆಜಿಎಫ್‌ನ ಅಂಡರ್ ಸನ್ ಪೇಟೆ - ರಾಬರ್ಟಸನ್ ಪೇಟೆಯ ಮುಖ್ಯರಸ್ತೆಯಲ್ಲಿರುತ್ತದೆ ಎಂದರೆ ಸರಿ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಮನೆಗಳಿರುತ್ತವೆ. ಸದರಿ ಪ್ರದೇಶವು ಜನಸಂದಣಿ ಪ್ರದೇಶ ಎಂದರೆ ಸರಿ. ಸದರಿ ಮನೆಯ ಮುಖ್ಯ ರಸ್ತೆಯಲ್ಲಿ ಜನರು ಓಡಾಡುತ್ತಿರುತ್ತಾರೆಂದರೆ ಸರಿ. ನಮ್ಮ ಮನೆಯಲ್ಲಿ ಬಾಡಿಗೆದಾರರೂ ಸಹ ಇರುತ್ತಾರೆ. ನಮ್ಮ ಮನೆಯ ಒಳಗಡೆ ನಡೆಯುವ ಘಟನೆಗಳು ಹೊರಗಡೆ ರಸ್ತೆ ಇಂದ ನೋಡಿದರೆ ಗೊತ್ತಾಗುತ್ತದೆ. ನಿಪಿ5 ಪಂಚನಾಮೆ ಮಾಡಿದಾಗ ನಮ್ಮ ಮನೆ ಮುಂದೆ 10 ಜನ ಸಾರ್ವಜನಿಕರು ಇರುತ್ತಾರೆ. ಅದರಲ್ಲಿ ಚಾಸಾ4, 5 ಮತ್ತು ಸಂತೋಷ್ ಇರುತ್ತಾರೆ. ಉಳಿಕೆ ಸಾರ್ವಜನಿಕರ ಹೆಸರು ನೆನಪಿಲ್ಲ. ಚಾಸಾ4 ಮತ್ತು 5 ರವರು ಸುಮಾರು 20 ವರ್ಷಗಳಿಂದ ಪರಿಚಯ. ನಿಪಿ5 ರ ಚೆಕ್ಕುಬಂದಿ ಪೂರ್ವಕ್ಕೆ ಮುಖ್ಯ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರ ಮತ್ತು ದಕ್ಷಿಣಕ್ಕೆ ಮನೆಗಳಿರುತ್ತವೆ. ನಾನು ಘಟನೆಯನ್ನು ಕಣ್ಣಾರೆ ನೋಡಿಲ್ಲ. ನಾನು ಹೇಳಿದಂತೆ 1ನೇ ಆರೋಪಿ ಚಾಸಾ1 ರವರಿಗೆ ಹಲ್ಲೆ ಮಾಡಿಲ್ಲ ಮತ್ತು ಪೊಲೀಸರು ಸ್ಥಳಕ್ಕೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ5 ರ ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ.

( 1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲನ್ನು 2ನೇ ಆರೋಪಿ ಪರ ವಕೀಲರು ಅಳವಡಿಸಿಕೊಳ್ಳಲು ಕೋರಿರುತ್ತಾರೆ ಅದರಂತೆ ಪಾಟೀಸವಾಲನ್ನು ಅಳವಡಿಸಿಕೊಳ್ಳಲಾಯಿತು)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.

<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>

<u>ಸಿ.ಸಿ. ಸಂಖ್ಯೆಃ 1308/2022</u>

**ಸಿ.ಡಬ್ಲ್ಯೂ:5 /ಪಿ.ಡಬ್ಲ್ಯೂ:4**

**ಪ್ರಮಾಣೀಕರಿಸಿದ ದಿನಾಂಕಃ 27.08.2024**

| | |
|---|---|
| **ಹೆಸರು** | **ನೌಶದ್** |
| **ತಂದೆಯ ಹೆಸರು** | **ಅಲ್ಲಾ ಬಕಾಶ್** |
| **ವಯಸ್ಸು** | 36 **ವರ್ಷ** |
| **ವೃತ್ತಿ** | ವ್ಯಾಪಾರ |
| ವಾಸ | **ಕೆ ಜಿ ಎಫ್** |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ಚಾಸಾ 1 ಗೊತ್ತಿಲ್ಲ. ಚಾಸಾ4 ರವರು ಪರಿಚಯ. ಆರೋಪಿಗಳು ಸಹ ಗೊತ್ತಿಲ್ಲ.

2. ಸಾಕ್ಷಿಯು ನಿಪಿ5 ಮತ್ತು ನಿಪಿ6 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರ್ತಿಸುತ್ತಾರೆ. ಸದರಿ ಸಹಿಗಳನ್ನು ನಿಪಿ5(ಬಿ) ಮತ್ತು ನಿಪಿ6(ಬಿ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ಬೀರ್ ಶಾಪ್ ನಿಂದ ಕೆ ಜಿ ಎಫ್ ಟೌನ್ ಗೆ ಹೋಗುವ ರಸ್ತೆಯಲ್ಲಿ ಹೋಗುತ್ತಿರುವಾಗ ಪೊಲೀಸರು ಯಾವುದೋ ಮನೆ ಮುಂದೆ ಸಹಿ ಮಾಡುವಂತೆ ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ5 ಮತ್ತು 6 ರ ಪಂಚನಾಮೆಗಳಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಹಾಲಿ ಪ್ರಕರಣದ ಬಗ್ಗೆ ಬೇರೆ ಏನೂ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-**

3. ದಿಃ 6.3.2022 ರಂದು ಪೊಲೀಸರು ತನ್ನ ಮತ್ತು ಚಾಸ 4 ರವರ ಸಮಕ್ಷಮ ನಿಪಿ5, 6 ರ ಪಂಚನಾಮೆಗಳನ್ನು ಮಾಡಿ ಒಂದು ಚಾಕು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿಪಿ5 ಮತ್ತು 6 ಪಂಚನಾಮೆಗೆ ಸ್ಥಳದಲ್ಲಿ ಓದಿ ತಿಳಿದು ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ-ಆರೋಪಿತರ ಪರ ಶ್ರೀಎಸ್ ಆರ್ ಜೆ ವಕೀಲರಿಂದಃ- ಇಲ್ಲ**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆಃ 1308/2022**

ಸಿ.ಡಬ್ಲ್ಯೂ:4 /ಪಿ.ಡಬ್ಲ್ಯೂಃ3

ಪ್ರಮಾಣೀಕರಿಸಿದ ದಿನಾಂಕಃ 27.08.2024

| | |
|---|---|
| ಹೆಸರು | ಅನ್ಸರ್ ಖಾನ್ |
| ತಂದೆಯ ಹೆಸರು | ಅಹಮದ್ ಖಾನ್ |

| | |
|---|---|
| ವಯಸ್ಸು | 52 ವರ್ಷ |
| ವೃತ್ತಿ | ಸಮಾಜ ಸೇವೆ |
| ವಾಸ | ಕೆ ಜಿ ಎಫ್ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ಚಾಸಾ 1 ಗೊತ್ತಿಲ್ಲ. ಚಾಸಾ5 ರವರು ಪರಿಚಯ. ಆರೋಪಿಗಳು ಸಹ ಗೊತ್ತಿಲ್ಲ.

2. ಸಾಕ್ಷಿಯು ಎರಡು ಪಂಚನಾಮೆಗಳನ್ನು ಮತ್ತು ಅವುಗಳಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸುತ್ತಾರೆ. ಸದರಿ ಪಂಚನಾಮೆಗಳನ್ನು ನಿಪಿ5 ಮತ್ತು ನಿಪಿ6 ಎಂದು, ಸಾಕ್ಷಿ ಸಹಿಗಳನ್ನು ನಿಪಿ5(ಎ) ಮತ್ತು ನಿಪಿ6(ಎ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ಬೀರ್ ಶಾಪ್ ನಿಂದ ಕೆ ಜಿ ಎಫ್ ಟೌನ್ ಗೆ ಹೋಗುವ ರಸ್ತೆಯಲ್ಲಿ ಹೋಗುತ್ತಿರುವಾಗ ಪೊಲೀಸರು ಯಾವುದೋ ಮನೆ ಮುಂದೆ ಸಹಿ ಮಾಡುವಂತೆ ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ5 ಮತ್ತು 6 ರ ಪಂಚನಾಮೆಗಳಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಹಾಲಿ ಪ್ರಕರಣದ ಬಗ್ಗೆ ಬೇರೆ ಏನೂ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-**

3. ದಿಃ 6.3.2022 ರಂದು ಪೊಲೀಸರು ತನ್ನ ಮತ್ತು ಚಾಸ 5 ರವರ ಸಮಕ್ಷಮ ನಿಪಿ5, 6 ರ ಪಂಚನಾಮೆಗಳನ್ನು ಮಾಡಿ ಒಂದು ಚಾಕು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿಪಿ5 ಮತ್ತು 6 ಪಂಚನಾಮೆಗೆ ಸ್ಥಳದಲ್ಲಿ ಓದಿ ತಿಳಿದುಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ-ಆರೋಪಿತರ ಪರ ಶ್ರೀಎಸ್ ಆರ್ ಜೆ ವಕೀಲರಿಂದಃ- ಇಲ್ಲ**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.